ಸೆಲೆಬ್ರಿಟಿ

## ಲೇಡಿ ಗಾಗಾಳಿಗೆ ಪ್ರೇತ ಭಯ!



ಸ್ಟೆಫಾನಿ ಜಾಯೆನ್ ಅಂಜೆಲೀನಾ ಎಂದರೆ ಯಾರಿಗೆ ಗೊತ್ತಾಗುತ್ತೆ? ಅದೇ 'ಲೇಡಿ ಗಾಗಾ' ಎಂದು ನೋಡಿ- ಪಡ್ಡೆಹುಡುಗರ ಕಣ್ಣರಳುತ್ತದೆ. 24ರ ಹರೆಯದ ಈ ಅಮೆರಿಕನ್ ಗಾಯಕಿ ಪಾಪ್ ಸಂಗೀತ ಕ್ಷೇತ್ರದಲ್ಲೀಗ ಸೂಜಿಗಲ್ಲಿನಂತಹ ಬೆಡಗಿ! ಈಕೆಯ ಪ್ರವಾಸಕ್ಕೆ ಯೂರೋಪ್, ಆಫ್ರಿಕಾದಲ್ಲೂ ಸಂಗೀತಪ್ರಿಯರು ಮುಗಿಬೀಳುತ್ತಿದ್ದಾರೆ. ಇದೀಗ 'ಜಗತ್ತಿನ ಅತ್ಯಂತ ಪ್ರಭಾವಶಾಲಿ ಮಹಿಳೆಯರಲ್ಲಿ ಈಕೆಯದ್ದು 13ನೇ ಸ್ಥಾನ' ಎಂದು 25 ಪ್ರಭಾವಶಾಲಿ ಮಹಿಳೆಯರ ಪಟ್ಟಿ ಮಾಡಿರುವ ಫೋರ್ಬ್ಸ್ ಮ್ಯಾಗಸಿನ್ ಪ್ರಕಟಿಸಿದೆ.

ವಿಷಯ ಅದಲ್ಲ- ಈ ಲೇಡಿ ಗಾಗಾಳಿಗೆ ವಿಪರೀತ 'ಭೂತ ಭಯ'ವಂತೆ! ಎಲ್ಲಿ ಹೋದರೂ ಭೂತ-ಪ್ರೇತಗಳು ತನ್ನನ್ನು ಹಿಂಬಾಲಿಸುತ್ತಿವೆ ಎನ್ನುವುದು ಈಕೆಯ ಗುಮಾನಿ. ಈಕೆ ಪ್ರವಾಸಕ್ಕೆ ಹೊರಟಾಗ ಪಂಚತಾರಾ ಹೋಟೆಲ್‌ಗಳಲ್ಲಿ ಉಳಿದು ಕೊಳ್ಳುತ್ತಾಳೆ. ಅಲ್ಲಿ ಉಳಿದುಕೊಳ್ಳುವ ಕೋಣೆಗಳನ್ನು ಇವಳ ವಿಶೇಷ ಸಿಬ್ಬಂದಿ ಮೊದಲೇ ಪೂರ್ತಿ ತಪಾಸಣೆ ಮಾಡುತ್ತಾರಂತೆ! ಈ ತಪಾಸಣೆಗೆಂದೇ 30,000 ಪೌಂಡ್ ಬೆಲೆಯ ಎಲೆಕ್ಟ್ರೋ ಮ್ಯಾಗ್ನೆಟಿಕ್ ಫೀಲ್ಡ್ ಮೀಟರ್‌ಅನ್ನೂ ಈಕೆಯ ಸಿಬ್ಬಂದಿ ಇಟ್ಟುಕೊಂಡಿದ್ದಾರೆ! ಜತೆಗೆ ಅಮೆರಿಕಾದ ಸುಪ್ರಸಿದ್ಧ ಬಾಹ್ಯಾಕಾಶ ಕೇಂದ್ರ ನಾಸಾದಲ್ಲಿ ತರಬೇತಿ ಪಡೆದ ಒಬ್ಬ ಕೆಮಿಸ್ಟ್ ಸದಾ ಈಕೆಯ

ಜತೆಗಿರುತ್ತಾನೆ! ಇತ್ತೀಚೆಗೆ ತೀರಿಕೊಂಡ ತನ್ನ ಚಿಕ್ಕಮ್ಮ ಪ್ರೇತವಾಗಿ ತನ್ನ ಬೆನ್ನು ಹತ್ತಿದ್ದಾಳೆ ಎಂದೂ ಈಕೆ ನಂಬಿದ್ದಾಳಂತೆ!

ಇತ್ತೀಚೆಗೆ ಮ್ಯಾನ್‌ಸ್ಟರ್‌ಬಾಲ್ ಪ್ರವಾಸ ನಡೆಸಿದ ಈಕೆಯ ಬಟ್ಟೆಬರೆಗಳನ್ನು ಕೊಂಡೊಯ್ಯಲೆಂದೇ 5 ಲಕ್ಷ ಪೌಂಡ್ ವೆಚ್ಚ ಮಾಡಿ ವಿಶೇಷ ವಿಮಾನ ತರಿಸಲಾಗಿತ್ತು. ಷೋನಲ್ಲಿ ಧರಿಸಲು ಕೈಯಿಂದ ಹೆಣೆದ ಒಂದು ಲೇಸನ್ನು 15 ಸಾವಿರ ಪೌಂಡ್ ಖರ್ಚು ಮಾಡಿ ಪೂರ್ವ ಯೂರೋಪ್‌ನಿಂದ ತರಿಸಲಾಯಿತಂತೆ. ಸ್ಟೇಜ್‌ನಲ್ಲಿ ನೃತ್ಯವೊಂದಕ್ಕೆ 52 ಸಾವಿರ ಪೌಂಡ್ ಖರ್ಚು ಮಾಡಿ, ಬ್ರಿಟನ್ನಿನಿಂದ ಬಾತ್‌ಟಬ್ ಒಂದನ್ನು ತರಿಸಿದಳಂತೆ! 'ಪ್ರೇತಗಳೇ ಭಯ ಪಟ್ಟುಕೊಳ್ಳುವಂತಿದೆ ಪಟ್ಟಿ..' ಅನ್ನಬಹುದೇ?

## ರಾಜಕುವರನ ಆಸೆ



ವಯಸ್ಸು 61 ಆದರೇನು... ಈತ ಇನ್ನೂ ರಾಜ ಕುವರನೇ! ಬ್ರಿಟನ್ನಿನ ರಾಜಕುಮಾರ ಚಾರ್ಲ್ಸ್‌ಗೆ ಇನ್ನು ಒಂದೇ ಆಸೆಯಂತೆ- ಜಗತ್ತಿನ ಪರಿಸರ ರಕ್ಷಣೆಗೆ ಉಳಿದ ಇಡೀ ಜೀವನವನ್ನು ಮುಡಿಪಾಗಿಡುವುದು! ಕಳೆದ ವಾರ ಕಾಮನ್‌ವೆಲ್ತ್ ಕ್ರೀಡಾಕೂಟವನ್ನು ಉದ್ಘಾಟಿಸಲು ರಾಣಿಯ ಪರವಾಗಿ ದೆಹಲಿಗೆ ಬಂದಿದ್ದ ಈ ರಾಜಕುಮಾರ, ಇದುವರೆಗೆ ಗರ್ಲ್‌ಫ್ರೆಂಡ್‌ಗಳ ಜತೆಗೆ ಸುತ್ತಾಟ ಹಾಗೂ ಫೋಟೊ ಪೋಸ್ ಕೊಡುವುದರಲ್ಲೇ ಹೆಚ್ಚು ಸುದ್ದಿ ಮಾಡಿದ್ದು. ಇದೀಗ ಮೊದಲ ಬಾರಿಗೆ ಆತ ಪರಿಸರ ಸಮತೋಲನದ ಬಗ್ಗೆ ಬರೆದ ಹೊಸ ಪುಸ್ತಕ 'ಹಾರ್ಮೊನಿ' ಬಿಡುಗಡೆ ಕಾಣುತ್ತಿದೆ. ಅಂದ ಹಾಗೆ, ಈತ ಹುಟ್ಟಿದ್ದು ನವೆಂಬರ್ 14ರಂದು. ನಮ್ಮಲ್ಲಿ ಚಾಚಾ ನೆಹರೂ ಜನ್ಮದಿನವನ್ನು ಮಕ್ಕಳ ದಿನಾಚರಣೆ ಎಂದು ಆಚರಿಸಿದಂತೆಯೇ ಈ ರಾಜಕುವರ ಜನ್ಮದಿನವನ್ನು 'ಪರಿಸರ ದಿನಾಚರಣೆ' ಎಂದು ಆಚರಿಸಲೂಬಹುದೇ!

## ಪ್ರಭುವೇ ಕಾಪಾಡು!



'ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದೆ ಕೋಟಿ ರೂಪಾಯಿ..' ಎಂದು ಬರೆದ ಕವಿ ಕೆ.ಎಸ್.ನ ಕಾಲವಾಗಿ ಬಹಳ ಕಾಲವಾಗಿದೆ. ಪ್ರತಿ ಚಿತ್ರಕ್ಕೆ ಲಕ್ಷಗಟ್ಟಳೆ ರೂಪಾಯಿ ಸಂಭಾವನೆ ಪಡೆಯುವ ಚಿತ್ರನಟ, ನೃತ್ಯ ನಿರ್ದೇಶಕ ಪ್ರಭುದೇವ ಮುತ್ತಿನಂತಹ ಹೆಂಡತಿಯನ್ನು ಬಿಟ್ಟು ಪ್ರಿಯತಮೆಯೊಂದಿಗೆ ತಿರುಗಾಡುತ್ತಿದ್ದಾನೆ. 'ನನ್ನ ಗಂಡನನ್ನು ಮನೆಗೆ ಬರುವಂತೆ ಮಾಡಿ; ಬೇರೊಬ್ಬಳು ಹುಡುಗಿಯ ಜತೆಗೆ ಆತ ತಿರುಗಾಡುವುದನ್ನು ತಪ್ಪಿಸಿ' ಎಂದು ಪ್ರಭುದೇವನ ಹೆಂಡತಿ, ಮಾಜಿ ಚಿತ್ರನಟಿ ರಮಾಲತಾ ನ್ಯಾಯದೇವರಲ್ಲಿ ಮೊರೆ ಇಟ್ಟಿದ್ದಾಳೆ. ಕೋರ್ಟಿಗೆ ಈಕೆ ಸಲ್ಲಿಸಿರುವ ಎರಡನೇ ಅರ್ಜಿಯನ್ನು ಪುರಸ್ಕರಿಸಿರುವ ಚೆನ್ನೈನ ನ್ಯಾಯಾಧೀಶರು 'ಆ ಹುಡುಗಿಯ ಜತೆ ಕೋರ್ಟಿಗೆ ಹಾಜರಾಗು' ಎಂದು ಪ್ರಭುದೇವನಿಗೆ ನೋಟಿಸ್ ಕೊಟ್ಟಿದ್ದಾರೆ!

ಅಂದ ಹಾಗೆ, ಪ್ರಭುದೇವನ ಜತೆ ಊರು ಸುತ್ತುತ್ತಿರುವ ಹುಡುಗಿ ಬೇರಾರೂ ಅಲ್ಲ- ತಮಿಳಿನ ಖ್ಯಾತ ತಾರೆ ನಯನತಾರಾ. ಈಕೆ ಚೆನ್ನೈಗೆ ಬಂದರೆ ಪ್ರಭುದೇವನ ಜತೆ ಪಾರ್ಕ್ ಹೋಟೆಲಲ್ಲೇ ಉಳಿದುಕೊಳ್ಳುತ್ತಾಳಂತೆ. ಇಬ್ಬರೂ ಸಿನಿಮಾ ಸಮಾರಂಭಗಳಿಗೆ ಒಟ್ಟಿಗೇ ಹೋಗುತ್ತಾರಂತೆ. ಇತ್ತೀಚೆಗೆ ಸಿನಿಮಾ ಸಮಾರಂಭದಲ್ಲಿ ಪ್ರಶಸ್ತಿ ಪಡೆಯಲು ಪ್ರಭುದೇವ ಈಕೆಯೊಟ್ಟಿಗೇ ವೇದಿಕೆ ಹತ್ತಿದನಂತೆ!

ತಮಾಷೆ ನೋಡಿ- ಪ್ರಭುದೇವ ಮತ್ತು ರಮಾಲತಾರದ್ದೂ ಪ್ರೇಮವಿವಾಹ! ಇತ್ತೀಚೆಗೆ ಹೈದರಾಬಾದ್‌ನ ಮ್ಯಾಗಸಿನ್ ಒಂದು ಪ್ರಭು-ಲತಾ ಜೋಡಿಯನ್ನು 'ವರ್ಷದ ಅತ್ಯುತ್ತಮ ದಂಪತಿ' ಎಂದು ಗುರುತಿಸಿ ಮುಖಪುಟದಲ್ಲೇ ಫೋಟೊ ಬೇರೆ ಹಾಕಿತ್ತು! ಪ್ರಭುವೇ ಕಾಪಾಡಬೇಕು!

■ ಬಿಂದು